ಜಯ ಮಂಗಳಂ - ಇಂದೀವರಾಕ್ಷಗೆ

(This is also listed under - ("mangaLam - indIvarAkshage")

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page no. 149.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 633.
3. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page no. 223.
4. **Note:** Lyrics given without highlights are as per Ref. 2. Wordings in Ref. 1 are same as in Ref. 2 except few differences which are given in green highlights. The wordings in Ref. 3 are also same as in Ref. 2 except few differences which are marked in yellow highlights.
5. **Note:** Singer has followed the lyrics as in Ref. 3.

ರಾಗ: ಭೈರವಿ ತಾಳ: ಛಾಪು (ಅಟ್ಟ)

ಜಯ ಮಂಗಳಂ ನಿತ್ಯ ಶುಭ ಮಂಗಳಂ ॥ ಪ ॥
(ಮಂಗಳಂ ಜಯ ಮಂಗಳಂ)

ಇಂದೀವರಾಕ್ಷಗೆ ಇಭರಾಜ ವರದಗೆ
ಇಂದಿರಾ ರಮಣ ಗೋವಿಂದ ಹರಿಗೆ
ನಂದನ ಕಂದಗೆ ನವನೀತ ಚೋರಗೆ
ವೃಂದಾರಕೇಂದ್ರ ಉಡುಪಿಯ ಕೃಷ್ಣಗೆ ॥ 1 ॥

ಕ್ಷೀರಾಬ್ಧಿವಾಸಗೆ ಕ್ಷಿತಿಜನ ಪಾಲಗೆ
(ಮಾರನ ಪಿತಗೆ) (ಮಾರನನು ಪಡೆದ) (ಮಾರನ್ನ ಪಡೆದ) ಮಂಗಳ ಮೂರ್ತಿಗೆ
ಚಾರು ಚರಣದಿಂದ ಚೆಲುವ ಗಂಗೆಯ ಪಡೆದ
ಕಾರುಣ್ಯ ಮೂರ್ತಿ (ಕೌಸ್ತುಭಧಾರಗೆ) (ಕೌಸ್ತುಭಧಾರಿಗೆ) ॥ 2 ॥

ವ್ಯಾಸಾವತಾರಗೆ ವೇದ ಉದ್ಧಾರಗೆ
ವಾಸಿತಾನಂತಪದ ಸಕಲೇಶಗೆ
ವಾಸುದೇವ ಮೂರ್ತಿ ಪುರಂದರ ವಿಠಲಗೆ
ದಾಸರಾ ಕಾಯ್ವ ರುಕ್ಮಿಣೀ ರಮಣಗೆ ॥ 3 ॥

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ಇಂದೀವರಾಕ್ಷ – ತಾವರೆಯಂತೆ ಕಣ್ಣುಳ್ಳವ.

ಇಭರಾಜ ವರದ – ಮೊರೆಹೊಕ್ಕ ಆನೆಯನ್ನು ಕಾಪಾಡಿದವ (ಗಜೇಂದ್ರ ಮೋಕ್ಷ).

ವೃಂದಾರ ಕೇಂದ್ರ – ದೇವತೆಗಳ ಒಡೆಯ.

ವೃಂದಾರಕ = ದೇವತೆ

ಕ್ಷೀರಾಬ್ಧಿ ವಾಸ – ಪಾಲ್ಗಡಲ ಮೇಲೆ ಮಲಗಿರುವವ.

ಕ್ಷಿತಿಜನ ಪಾಲ = ಲೋಕ ಸಂರಕ್ಷಕ

ಮಾರನ ಪಿತ – ಮನ್ಮಥನ ತಂದೆ.

ವ್ಯಾಸವತಾರ = ವ್ಯಾಸರು ವಿಷ್ಣುವಿನ ಅಂಶರೂಪದಿಂದ ಅವತಾರ ತಾಳಿದವರೆಂದು ಉಲ್ಲೇಖವಿದೆ (ಮತ್ಸ್ಯ ೫೨ / ೩ - ೧೧)

> ಇವರು ವೇದಗಳನ್ನು ವ್ಯವಸ್ಥಿತ ರೂಪದಲ್ಲಿ ವಿಭಾಗಿಸಿದುದರಿಂದ ಇವರಿಗೆ ವೇದವ್ಯಾಸರೆಂಬ ಹೆಸರಿದೆ. ಇವರ ತಂದೆ ಪರಾಶರ ಮುನಿ. ತಾಯಿ ಸತ್ಯವತಿ. ಇವರು ಮಹಾಭಾರತ, ಭಾಗವತ, ಹರಿವಂಶ ಪುರಾಣಗಳ ಕರ್ತರು. ಇವಲ್ಲದೆ ಹದಿನೆಂಟು ಪುರಾಣಗಳನ್ನು ಇವರೇ ಬರೆದವರೆಂದು ಪರಂಪರೆ ಹೇಳುತ್ತದೆ.

ವಾಸಿತ + ಅನಂತಪದ = ವೈಕುಂಠದಲ್ಲಿ ವಾಸ ಮಾಡುವವ

ವಾಸಿತಾನಂತ ಪದ – ಕೊರೆಯಿಲ್ಲದ ವೈಕುಂಠದಲ್ಲಿ ಇರುವವ; ವಿಷ್ಣುವಿನ ಮೂರು ನೆಲೆಗಳು, ವೈಕುಂಠ, ಶ್ವೇತದ್ವೀಪ ಮತ್ತು ಅನಂತಾಸನ ಎಂದೂ ಇದೆ.

Classification: Keerthane
Ankita: purandara vittala

Location: Udupi, Karnataka
Category: Mangala Song, Vishnu Stuti, Pooja Tatva
Sub-Category: Vishnu, Krishna, benne, kalla, govinda, mangala, veda, vaikunta, Rukmini, gange, jaya, Samudra,
Pravachana: NA
Explanation: NA